

# ಲಂಡನ್‌ನ ಬೇಬಿ ಸ್ಪಾ







ದಣಿದ ದೇಹಕ್ಕೆ ಹದವಾಗಿ ಮಸಾಜ್ ಮಾಡಿ ಮತ್ತೆ ನವ ಚೈತನ್ಯ ನೀಡಲು ವೈದ್ಯರ ಚಿಕಿತ್ಸೆ ಅಗತ್ಯ ಇಲ್ಲ. ಇದನ್ನು ಅರಿತ ಮನುಕುಲ ಮನಃಶಾಂತಿಗಾಗಿ ಮತ್ತೆ ನಿಸರ್ಗದತ್ತ ಮುಖ ಮಾಡುತ್ತಿದೆ. ಅದಕ್ಕಾಗಿ ಪ್ರಕೃತಿ ಚಿಕಿತ್ಸೆಯ ಹೊಸ ಹೊಸ ಪ್ರಕಾರಗಳು ಜನ್ಮತಾಳಿವೆ. ಮಹಾ ನಗರಗಳಲ್ಲಿ ಅದರಂತೆಯೇ 'ಸ್ಪಾ' ಹುಟ್ಟಿಕೊಂಡಿವೆ. ಅಲ್ಲಿನ ಉಪಚಾರ ದುಬಾರಿಯಾದರೂ ತನ್ನ ಆಕರ್ಷಣೆಯ ಮೋಡಿಯನ್ನು ಕಡಿಮೆ ಮಾಡಿಕೊಂಡಿಲ್ಲ. ಇದೆಲ್ಲ ದೊಡ್ಡವರಿಗೆ ಮಾತ್ರ ಎಂದುಕೊಂಡರೆ ನಿಮ್ಮ ನಿರೀಕ್ಷೆ ಸುಳ್ಳಾದೀತು. ಇಂಗ್ಲೆಂಡ್‌ನಲ್ಲಿ ಚಿಕ್ಕ ಚಿಕ್ಕ ಮಕ್ಕಳಿಗೂ ಈಗ 'ಸ್ಪಾ' ಇದೆ ಅಂದ್ರೆ ನಂಬುತ್ತೀರಾ.

ಲಂಡನ್‌ನಲ್ಲಿ ಮಕ್ಕಳಿಗಾಗಿಯೇ ಒಂದು ವಿಶೇಷ 'ಬೇಬಿ ಸ್ಪಾ' ಆರಂಭಗೊಂಡಿದೆ. ಇಲ್ಲಿ ಬಿಸಿ ನೀರಿನ ಟಬ್ ಬಾತ್, ಆಯಿಲ್ ಮಸಾಜ್‌ನಂತಹ ಸೇವೆಗಳನ್ನು ನೀಡಲಾಗುತ್ತದೆ. ವಿಶೇಷ ಸ್ನಾನ, ಮಸಾಜ್ ಮತ್ತು ಇತರ ಆರೋಗ್ಯವರ್ಧಕ ಸೇವೆಗಳಿಗೆ ಸುಮಾರು 65 ಡಾಲರ್ ಶುಲ್ಕ ವಿಧಿಸಲಾಗುತ್ತದೆ. ಒಂದು ಗಂಟೆ ಕಾಲ ಪ್ರತಿ ಮಗುವಿಗೆ ಈ ಸೇವೆ ಲಭ್ಯವಿದೆ. ಹಾಗೆಯೇ ಇಲ್ಲಿ ವಿವಿಧ ರೀತಿಯ ಸೇವೆಗಳನ್ನು ನಿರಂತರ ಬಳಸಿಕೊಳ್ಳುವವರಿಗೆ ಪ್ಯಾಕೇಜ್ ಮತ್ತು ರಿಯಾಯಿತಿ ಕೂಡಾ ದೊರೆಯುತ್ತದೆ.

ತರಬೇತಿ ಪಡೆದ ಆಯಾ ಮತ್ತು ನರ್ಸ್‌ಗಳು ಇಲ್ಲಿ ಸೇವೆ ನೀಡುತ್ತಿದ್ದು, ಈ ವಿಶೇಷ ಮಸಾಜ್‌ನಿಂದಾಗಿ ಮಕ್ಕಳ ಸ್ನಾಯು ಮತ್ತು ಎಲುಬುಗಳು ಬಲಗೊಳ್ಳುತ್ತವೆ, ರಕ್ತಸಂಚಾರ ಸುಗಮಗೊಳ್ಳುತ್ತದೆ, ಇದರಿಂದ ಮಕ್ಕಳ ಆರೋಗ್ಯವೂ ಸುಧಾರಿಸಿದೆ ಎನ್ನುವುದು ಸ್ಪಾ ಮಾಲೀಕರ ಅಭಿಪ್ರಾಯ. ಪತಿ–ಪತ್ನಿ ಇಬ್ಬರೂ ಉದ್ಯೋಗಸ್ತರಾಗಿದ್ದು, ಮಕ್ಕಳ ಪಾಲನೆ, ಪೋಷಣೆಯ ಬಗ್ಗೆ ಗಮನ ಹರಿಸಲು ಸಮಯವಿಲ್ಲದ ಇಂದಿನ ಪರಿಸ್ಥಿತಿಯಲ್ಲಿ ಇಂತಹ ಸೇವೆಗಳ ಅಗತ್ಯವನ್ನು ಅಲ್ಲಿನ ಜನತೆ ಬಯಸುತ್ತಿದ್ದಾರೆ.

ಪಾಲಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದ ಹಿನ್ನಲೆಯಲ್ಲಿ ಇನ್ನಷ್ಟು ಹೊಸ ಬಗೆಯ ಸೇವೆ ಆರಂಭಿಸುವ ಯೋಜನೆಯಲ್ಲಿರುವ ಮಾಲಕರು, ಶೀಘ್ರವೇ ಅಮೆರಿಕದ ನಗರಗಳಲ್ಲಿ ಕೂಡಾ ಬೇಬಿ ಸ್ಪಾದ ಶಾಖೆಗಳನ್ನು ತೆರೆಯಲಿದ್ದಾರೆ.

ಮುಂದಿನ ದಿನಗಳಲ್ಲಿ ಈ ಸೇವೆ ಭಾರತದ ನಗರಗಳಿಗೂ ಕಾಲಿಟ್ಟರೆ ಆಶ್ಚರ್ಯಪಡಬೇಕಾಗಿಲ್ಲ...

■ ಕಿರಣ್ ಇಜಿಮಾನ್